Web site: www.cescmysore.org
CIN: U40109KA2004SGC0351

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ದೂರವಾಣಿ ಸಂಖ್ಯೆ : 0821 – 2417106
ಫ್ಯಾಕ್ಸ್ ಸಂಖ್ಯೆ :: 0821 – 2417105
E-mail: cfo@cescmysore.org

ನಿಗಮ ಕಾರ್ಯಾಲಯ,
ನಂ 29, ವಿಜಯನಗರ, 2ನೇ ಹಂತ, ಹಿನಕಲ್
ಮೈಸೂರು-570017.

ಕ್ರಮಾಂಕ: ಸೆಸ್ಕ್/ಮುಲೆಅ/ಯೋಜನಾ ಶಾಖೆ/ Cys-697
ಲಗತ್ತು: ಅನುಬಂಧ-3 ವಿವರಣಾ ಪಟ್ಟಿ

ದಿನಾಂಕ: -1 SEP 2020

ಗೆ,

ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾವಿಸನಿನಿ, ಕಾರ್ಯ ಮತ್ತು ಪಾಲನೆ ವಿಭಾಗ,

**ಅತೀ ಜರೂರು**

ಮಾನ್ಯರೆ,

ವಿಷಯ: **ಡಿಡಿಯುಜಿಜಿವೈ** ಯೋಜನಾ ಕಾಮಗಾರಿಯ ಅನುಷ್ಠಾನ ಸಂಬಂಧ ಭರಿಸಿರುವ ವೆಚ್ಚದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸುವ ಬಗ್ಗೆ-ಕೇಂದ್ರ ಸರ್ಕಾರದಿಂದ ಅನುದಾನ ಸ್ವೀಕರಣೆ ಹಾಗೂ ಅಂತಿಮ ವರದಿ ಸಲ್ಲಿಸುವಿಕೆಗಾಗಿ.

ಉಲ್ಲೇಖ:-1. ಈ ಕಛೇರಿ ಪತ್ರ ಸಂಖ್ಯೆ ಸೆಸ್ಕ್/ಮುಲೆಅ/ಆಕಾ/ಯೋಜನೆ/ Cys-1319/03.01.2020
2. ಈ ಕಛೇರಿ ಪತ್ರ ಸಂಖ್ಯೆ ಸೆಸ್ಕ್/ಮುಲೆಅ/ಆಕಾ/ಯೋಜನೆ/ Cys-1169/02.12.2019
3. ಈ ಕಛೇರಿ ಪತ್ರ ಸಂಖ್ಯೆ ಪ್ರವ್ಯ/ಉಪ್ರವ್ಯ-೨/ಸಪ್ರವ್ಯ(ಯೋಜನೆ-ಲೆಕ್ಕಗಳು)/2019-20/ Cys-1190/05.12.2019
4. ಈ ಕಛೇರಿ ಅ.ಜ್ಞಾಪತ್ರ ಸಂಖ್ಯೆ ಸೆಸ್ಕ್/ಮುಲೆಅ/ಆಕಾ/ಯೋಜನೆ/ Cys-455/05.07.2019
5. ಈ ಕಛೇರಿ ಸಭಾ ಸೂಚನಾ ಪತ್ರ ಸಂಖ್ಯೆ ಸೆಸ್ಕ್/ಮುಲೆಅ/ಆಕಾ/ಯೋಜನೆ/ Cys-346/12.06.2019
6. ಈ ಕಛೇರಿ ಸಭಾ ಸೂಚನಾ ಪತ್ರ ಸಂಖ್ಯೆ ಮುಲೆಅ/ಪ್ರವ್ಯ(ಲೆ&ಕಂ)/ಉಪ್ರವ್ಯ(ಲೆಕ್ಕ&ಕಂ)/ 2019-20/ Cys-568/25.07.2019
7. ಈ ಕಛೇರಿ ಪತ್ರ ಸಂಖ್ಯೆ ಸೆಸ್ಕ್/ಮುಲೆಅ/ಆಕಾ/ಯೋಜನೆ/ Cys-456/05.07.2019
8. ಈ ಕಛೇರಿ ಪತ್ರ ಸಂಖ್ಯೆ ಪ್ರವ್ಯ/ಉಪ್ರವ್ಯ-೨/ಸಪ್ರವ್ಯ(ಯೋಜನೆ-ಲೆಕ್ಕಗಳು)/ Cys-203/08.05.2019

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಾವಿಸನಿನಿ ವ್ಯಾಪ್ತಿಯಲ್ಲಿ ಕೈಗೊಂಡಿರುವ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಸದರಿ ಯೋಜನೆಗಳಿಗೆ ಭರಿಸುವ ವೆಚ್ಚಗಳನ್ನು ಏಕರೂಪದಲ್ಲಿ ಲೆಕ್ಕೀಕರಿಸುವ ಬಗ್ಗೆ, ಹಾಗೂ ಆಸ್ತೀ ವರ್ಗೀಕರಣಕ್ಕೆ ಪ್ರತ್ಯೇಕ ರಿಜಿಸ್ಟರ್ ನಿರ್ವಹಣೆ/ಷೆಡ್ಯೂಲ್ ನಿರ್ವಹಣೆ ಬಗ್ಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಹಾಗೂ ಮಾಹಿತಿಗಳನ್ನು ಒದಗಿಸಲು ಸೂಚಿಸಿ ಈಗಾಗಲೇ ಉಲ್ಲೇಖಗಳ ಪತ್ರಗಳಲ್ಲಿ ಸೂಚನೆಯನ್ನು ನೀಡಲಾಗಿರುತ್ತದೆ.

ಯೋಜನಾ ವೆಚ್ಚಕ್ಕೆ ಗುತ್ತಿಗೆದಾರರಿಗೆ ಪಾವತಿಸಿದ ಮೊತ್ತಗಳನ್ನು ಲೆಕ್ಕ ಶೀರ್ಷಿಕೆ 10. ರಡಿಯಲ್ಲಿ ಸಂಪೂರ್ಣವಾಗಿ ಆಸ್ತೀವರ್ಗೀಕರಣಕ್ಕೆ ಪರಿಗಣಿಸದೇ ಲೆಕ್ಕ ಶೀರ್ಷಿಕೆ 26.605 (Turnkey Contractors Control Account) ರಡಿಯಲ್ಲಿ ಮುಂದುವರೆಸುತ್ತಿರುವುದು ಕಂಡುಬಂದಿರುತ್ತದೆ. ಈ ಹಿನ್ನಲೆಯಲ್ಲಿ ನಿಗದಿತ ಅವಧಿಯಲ್ಲಿ ಪಾವತಿಸಿದ ಮೊತ್ತವನ್ನು ಆಸ್ತೀ ವರ್ಗೀಕರಣಗೊಳಿಸದಿದ್ದ ಪಕ್ಷದಲ್ಲಿ ಅದು ನಿಗಮದ ಲೆಕ್ಕಪತ್ರ ನೀತಿಯಲ್ಲಿ ವ್ಯತಿರಿಕ್ತ ಪ್ರಭಾವವನ್ನು ಬೀರುವ ಸಾಧ್ಯತೆಯಿರುತ್ತದೆ ಹಾಗೂ ಮಹಾಲೇಖಪಾಲಕರುರವರ ಆಕ್ಷೇಪಣೆಗೆ ಗುರಿಯಾಗುವ ಸಾಧ್ಯತೆಗಳು ಹೆಚ್ಚು. ( ಈ ಸಂಬಂಧ ಮಾಹಿತಿಗಾಗಿ ತಮ್ಮ ವಿಭಾಗದಿಂದ ಮಾರ್ಚಿ-2020ರ ಅಂತ್ಯಕ್ಕೆ ಸಲ್ಲಿಸಲ್ಪಟ್ಟ ಅನುಬಂಧ-3ನ್ನು ಮತ್ತೊಮ್ಮೆ ಪರಿಶೀಲಿಸಲು ಸಂಬಂಧಿಸಿದವರಿಗೆ ಸೂಚನೆ ನೀಡುವುದು)

ಈ ಹಿನ್ನೆಲೆಯಲ್ಲಿ ಅನುಷ್ಠಾನಗೊಂಡ ಕಾಮಗಾರಿ ವೆಚ್ಚವನ್ನು ಲೆಕ್ಕಶೀರ್ಷಿಕೆವಾರು ದಾಖಲಿಸಿ ತಾಳೆಪಟ್ಟಿಯಲ್ಲಿ ಸಮನ್ವಯಗೊಳಿಸುವುದು ಹಾಗೂ ನಿಯಮಾನುಸಾರ ಆಸ್ತೀವರ್ಗೀಕರಣಗೊಳಿಸಲು,ಸವಕಳಿಯನ್ನು ದಾಖಲಿಸಲು, ಮತ್ತು ಷೆಡ್ಯೂಲ್‌ಗಳಲ್ಲಿ ಗುತ್ತಿಗೆದಾರರವಾರು ಯೋಜನಾವಾರು (payable/receivables A/cs i.e. 26.602,26.605, 28.1097,46.1047 etc) ನಿಗಮಕ್ಕೆ ಬರಬೇಕಾದ ಮೊತ್ತ ಪಾವತಿಸಬೇಕಾದ ಮೊತ್ತಗಳ ವಿವರಗಳನ್ನು ದಾಖಲಿಸಿ ನಿರ್ವಹಿಸಲು ಸೂಚಿಸಿದೆ.

ಮೇಲ್ಕಂಡ ಯೋಜನೆಯು ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾಗಿದ್ದು, ಮಂಜೂರಾಗಿರುವ ಅನುದಾನವನ್ನು ಸ್ವೀಕರಿಸಲು ಕೇಂದ್ರ ಸರ್ಕಾರದ ನೋಡಲ್ ಏಜೆನ್ಸಿರವರಿಗೆ ಭೌತಿಕ ಪ್ರಗತಿ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಿ ಅರ್ಹ ಅನುದಾನವನ್ನು ಸ್ವೀಕರಿಸಬೇಕಾಗಿರುತ್ತದೆ. ಡಿಡಿಯುಜಿಜೆವೈ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅರ್ಹತೆ ಹೊಂದಿರುವ ವೆಚ್ಚದ ಬಿಲ್ಲುಗಳನ್ನು ನಿಗಮದ ನಿಯಮಾನುಸಾರ ಪಾವತಿಸಲು ಕ್ರಮವಹಿಸಬೇಕಾಗಿರುತ್ತದೆ. ಸಂಪೂರ್ಣವಾಗಿ ಮೊತ್ತಗಳನ್ನು ಪಾವತಿಸಿದ ವಿವರಗಳನ್ನು ಸಲ್ಲಿಸಿದ ನಂತರವೇ ನೋಡಲ್ ಏಜೆನ್ಸಿರವರು ಅಂತಿಮ ವರದಿಯನ್ನು ಅಂಗೀಕರಿಸಿ ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು ನಿಗಮದ ನಿಯಮಾನುಸಾರ/ವಿಸ್ತೃತ ಕಾರ್ಯಾದೇಶದ ನಿಯಮಗಳನ್ನು ಪಾಲಿಸಿ ಅರ್ಹತೆ ಹೊಂದಿರುವ ಎಲ್ಲಾ ಬಿಲ್ಲುಗಳನ್ನು ಪಾಸು ಮಾಡಿ ಪಾವತಿಯ ಕ್ರಮಕ್ಕಾಗಿ ನಿಗಮ ಕಛೇರಿಗೆ ಸಲ್ಲಿಸಲು ಸಂಬಂಧಿಸಿದವರಿಗೆ ಸೂಚನೆ ನೀಡುವಂತೆ ತಿಳಿಯಪಡಿಸಿದೆ **ಹಾಗೂ ಈಗಾಗಲೇ ವಿಭಾಗಗಳಿಗೆ ನೀಡಲಾಗಿರುವ ನಮೂನೆ 1,2,3 ಮತ್ತು ಇತರೆ ನಮೂನೆಗಳಲ್ಲಿ ಆರ್ಥಿಕ ಪ್ರಗತಿಯ ವಿವರಗಳನ್ನು ದಿನಾಂಕ 05.09.2020 ರ ಒಳಗಾಗಿ ಆಂತರಿಕ ಲೆಕ್ಕಪರಿಶೋಧನೆಗೆ ಒಳಪಡಿಸಿ ದೃಢೀಕೃತ ಹಾರ್ಡ್ ಪ್ರತಿಯನ್ನು ಹಾಗೂ ಸಾಫ್ಟ್ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವಂತೆ ಸೂಚಿಸಿದೆ.**

ತಮ್ಮ ವಿಶ್ವಾಸಿ

ಮುಖ್ಯ ಆರ್ಥಿಕ ಅಧಿಕಾರಿ
ಚಾವಿಸನಿನಿ, ಮೈಸೂರು.

ಪ್ರತಿಗಳು:-

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ)/ಚಾವಿಸನಿನಿ, ನಿಗಮ ಕಛೇರಿ, ಮೈಸೂರುರವರ ಅವಗಾಹನೆಗಾಗಿ.
2. ಮುಖ್ಯ ಇಂಜಿನಿಯರ್(ವಿದ್ಯುತ್), ಕಾ ಮತ್ತು ಪಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
3. ಪ್ರಧಾನ ವ್ಯವಸ್ಥಾಪಕರು (ಯೋಜನಾ ಶಾಖೆ)/ (ಲೆಕ್ಕ ಮತ್ತು ಕಂ) ಚಾವಿಸನಿನಿ, ನಿಗಮ ಕಛೇರಿ,ಮೈಸೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ, ಕಾ ಮತ್ತು ಪಾ ವೃತ್ತ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಉಪ ಪ್ರಧಾನ ವ್ಯವಸ್ಥಾಪಕರು(ಲೆಕ್ಕ ಮತ್ತು ಕಂ)/(ಬಿ&ಆರ್)/ ಚಾವಿಸನಿನಿ, ನಿಗಮ ಕಛೇರಿ,ಮೈಸೂರು.
6. ಉಪ ಪ್ರಧಾನ ವ್ಯವಸ್ಥಾಪಕರು, (ಎಂಐಎಸ್), ಚಾವಿಸನಿನಿ ನಿಗಮ ಕಛೇರಿ, ಮೈಸೂರುರವರ ಮಾಹಿತಿಗಾಗಿ ಹಾಗೂ ಪತ್ರವನ್ನು ಚಾವಿಸನಿನಿ ಅಂತರ್ಜಾಲದಲ್ಲಿ ಪ್ರಕಟಿಸುವುದಕ್ಕಾಗಿ.
7. ಮಾನ್ಯ ವ್ಯವಸ್ಥಾಪಕ ನಿರ್ದೇಶಕರುರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ.
8. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಲೆಕ್ಕಗಳು)/(ಹಣಕಾಸು/ಸಂಪನ್ಮೂಲ), ಚಾವಿಸನಿನಿ, ನಿಗಮ ಕಛೇರಿ,ಮೈಸೂರು.
9. ಎಲ್ಲಾ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ ಹಾಗು ಸೂಕ್ತ ಕ್ರಮಕ್ಕಾಗಿ. ಪ್ರತಿಯನ್ನು ತಮ್ಮ ವಿಭಾಗದ ಈಮೇಲ್ ವಿಳಾಸಕ್ಕೆ ಕಳುಹಿಸಲಾಗಿರುತ್ತದೆ.
10. ಎಲ್ಲಾ ಲೆಕ್ಕಾಧಿಕಾರಿ, (ಆಂ.ಪ)ಚಾವಿಸನಿನಿ,ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ: ಹಾಗೂ ಪ್ರತಿಯನ್ನು ಚಾವಿಸನಿನಿ ಅಂತರ್ಜಾಲದಿಂದ ಸ್ವೀಕರಿಸುವುದು.
11. ಮುಖ್ಯ ಆರ್ಥಿಕ ಅಧಿಕಾರಿಯವರ ವಿಶೇಷ ಅಧಿಕಾರಿಯವರ ಮಾಹಿತಿಗಾಗಿ.
12. ಪ್ರಕ/ಕ.